ತಾಳ್ಮೆಗೆಟ್ಟು ಕಳೆದುಕೊಂಡು ನೋಟಿಸು ಕೊಟ್ಬಾಗ್ಯೆತೆ ಇನ್ನೇನು? ಹೋಗಪ್ಪಾ ಸೈಡಿಗೆ... ಎಂದು ಅವರನ್ನು ಕಳಿಸಬಹುದಿತ್ತು. ಆದರೆ ಒಂದು ವೇಳೆ ನಿಜವಾಗಲೂ ಯಾರಾದರೂ ವಿಐಪಿಗಳು ಫೋನಿನಲ್ಲಿದ್ದರೆ? ಹಾಗಾಗಿ ಸಾವಧಾನವಾಗಿ ಫೋನು ತೆಗೆದುಕೊಂಡು ಆ ಬದಿಯಲ್ಲಿದ್ದವರಿಗೆ ಇವರು ಸಾಧನೆ, ತೋರಿದ ಪರಾಕ್ರಮಗಳನ್ನೆಲ್ಲಾ ವಿವರಿಸುತ್ತ ಇವರಿಗೆ ಹಾಕಲಾದ ಕೇಸು ಮತ್ತು ಸೇವಿಸಿದ ಆಲ್ಕೋಹಾಲಿನ ಪ್ರಮಾಣ ತಿಳಿಸುತ್ತ ಮನದಟ್ಟು ಮಾಡಿಸುತ್ತಿದ್ದೆವು. ಇದರಿಂದ ಕುಡುಕ ಮಹಾಪ್ರಭುಗಳು ಮಾಡಿಕೊಟ್ಟ ಫೋನು ಅವರಿಗೇ ಉಲ್ಟಾ ಹೊಡೆಯುತ್ತಿತ್ತು. 'ಮುಚ್ಕಂಡ್ ಬಾರಲೇ, ಕುಡ್ದು ತಗಲಾಕ್ಕಂಡಿದ್ದಲ್ದೆ ನಮಗ್ಯಾಕೆ ಸರೋತ್ತಿನಾಗೆ ಫೋನು ಮಾಡ್ತೀಯಾ... ಬೈಕು ಈಗ್ಲೇ ಬಿಡಿಸ್ಕಂಡು ನೀನೇನು ಡೆಲ್ಲಿಗಾ ಹೋಗ್ತೀಯಾ? ತೆಪ್ಪಗೆ ಮನೆ ಸೇರ್ಕೋ, ಬೆಳಗ್ಗೆ ಫೈನು ಕಟ್ಟಿ ಬಿಡಿಸ್ಕಳೀವಂತೆ...' ಅಂತ ಆ ಕಡೆಯಿದ್ದವರೂ ಉಗಿದು ಉಪ್ಪಿನಕಾಯಿ ಹಾಕಿ ಫೋನು ಮಡಗುತ್ತಿದ್ದರು.

'ನಿನ್ ಪಾಡಿಗೆ ನಾಳೆ ಬಂದು ಸೈಲೆಂಟಾಗಿ ಕೇಸು ಮುಗಿಸ್ಕಳದು ಬಿಟ್ಟು ಎಲ್ರಿಗೂ ಡಂಗುರ ಬೇರೆ ಹೊಡ್ದು ಸಾರ್ತಾ ಇದೀಯಲ್ಲೋ... ನಾಳೆ ಏರಿಯಾದೋರಿಗೆಲ್ಲಾ ನೀನು ಎಣ್ಣೆ ತಗಂಡು ಸಿಗೆಬಿದ್ದು ಕೇಸು ಹಾಕಿಸ್ಕಂಡಿರೋದು ಗೊತ್ತಾದ್ರೆ ನಿಂದೇ ಅಲ್ವಾ ಮರ್ವಾದೆ ಹೋಗಾದು?' ಅಂತ ತಿಳಿ ಹೇಳಿ ಕಳಿಸುತ್ತಿದ್ದೆವು.

ಕೆಲವು ಕಡುಸಿಟ್ಟಿನ ಪಾರ್ಟಿಗಳು ನಿಜಕ್ಕೂ ಕುಸ್ತಿಗೆ ಬಿದ್ದವರಂತೆ ಮೇಲೇರಿ ಬರುತ್ತಿದ್ದರು. ತೋಳೇರಿಸಿ ನಾನಾ... ನೀನಾ? ಅಂತ ಮಲ್ಲಯುದ್ಧಕ್ಕೆ ಕರೆಯುತ್ತಿದ್ದರು. ಅವಾಚ್ಯ ಶಬ್ದಗಳನ್ನು ಬಳಸಿ ಕೂಗಾಡುತ್ತಿದ್ದರು. ಸುಮ್ಮನೆ ನಮ್ಮಂತ ಮುಗುದರನ್ನು ಹಿಡಿದು ಯಾಕ್ರೀ ಕಾಟ ಕೊಡ್ತೀರಾ? ಮೊದ್ಲು ರಸ್ತೆಲಿರೋ ಬಾರುಗಳ್ನೆಲ್ಲಾ ಮುಚ್ಚಿಸಿ. ಅವಿದ್ರೆ ತಾನೇ ನಾವು ಕುಡಿಯಕ್ ವೋಗದು? ಅಂತ ಗಾಯಗೊಂಡ ಹುಲಿಯಂತೆ ಗರ್ಜಿಸುತ್ತಿದ್ದರು. ಆಹಾ, ಒಳಗಿರುವ ಪರಮಾತ್ಮನೇ ಏನಪ್ಪಾ ನಿನ್ನೀ ಲೀಲೆ? ಅಂದುಕೊಂಡು ನಾವು ಸುಮ್ಮನಿರುತ್ತಿದ್ದೆವು. ಮರುದಿನ ಠಾಣೆಗೆ ಬಂದಾಗ ಅದೇ ಮನುಷ್ಯ ಥೇಟ್ ಕುನ್ನಿಯಂತಾಗಿರುತ್ತಿದ್ದ. ಕೈಕಟ್ಟಿಕೊಂಡು ನಿಂತರೆ ತಗ್ಗಿಸಿದ ತಲೆ ಮೇಲೇಳುತ್ತಿರಲಿಲ್ಲ. ಎಂಗಾದ್ರೂ ಮಾಡಿ ಗಾಡಿ ಬಿಡಿಸ್ಕಂಡ್ರೆ ಸಾಕಪ್ಪಾ ಅಂತ ಚಡಪಡಿಸುತ್ತಿದ್ದ. ನಿನ್ನೆ ರಾತ್ರಿ ಅಷ್ಟು ಚೆನ್ನಾಗಿ 'ಯಕ್ಷಗಾನ' ತೋರಿದ ರಣಕಲಿ ಇವನೇನಾ? ಅನ್ನುವ ಅನುಮಾನ ಬರುತ್ತಿತ್ತು.

ತಪಾಸಣೆ ಸಮಯದಲ್ಲಿ ತರತರನಾದ ಮಂದಿ ಸಿಕ್ಕುತ್ತಿದ್ದರು. ಅಪ್ಪನ ಬೈಕು ಎತ್ತಿಕೊಂಡು ಬಂದು ಒಂಚೂರು ಗುಟುಕರಿಸಿ ಹೋಗಿಬಿಡೋಣವೆಂದು ಬಾರ್ ಕಡೆಗೆ ತಿರುಗಿಸುವರಿದ್ದರು. ಗೆಳೆಯನ ಬೈಕೇರಿ ಇದೋ ಹೀಗೆ ಬಂದೆ ಅನ್ನುತ್ತಾ ಒಂದೆರೆಡು ಪೆಗ್ಗೇರಿಸಿ ಹಿಂದಿರುವಾಗ ಲಬಕ್ಕನೆ ಸಿಕ್ಕಿಕೊಳ್ಳುತ್ತಿದ್ದರು. ಅಂಥವರ ಪಡಿಪಾಟಲು ಯಾರಿಗೂ ಬೇಡ! ಇತ್ತ ಫೈನಿನ ಹೊಡೆತ, ಅತ್ತ ಅಪ್ಪನ ಥಳಿತ, ಸ್ನೇಹಿತನ ಉಗಿತ... ಎಲ್ಲವನ್ನೂ ಎದುರಿಸಬೇಕಾಗುತ್ತಿತ್ತು. ಹಾಗಾಗಿ ಚಿಕ್ಕ ಮಕ್ಕಳಂತೆ ಬುಟ್ಬುಡಿ ಸಾ... ನಮ್ಮಪ್ಪಗೆ ಗೊತ್ತಾದ್ರೆ ಚರ್ಮ ಸುಲೀತಾನೆ ಅಂತ ಗೋಳಿಡುತ್ತಿದ್ದರು. ಗೆಳೆಯ ಹುಡ್ಗೀರ ಮುಂದೆಲ್ಲಾ ಮಾನ ಕಳೀತಾನೆ ಬಿಡಣ್ಣೋ ನಿನ್ ದಮ್ಮಯ್ಯ ಅಂತ ಗೋಗರೆಯುತ್ತಿದ್ದರು. ನಾವು ಹಾಕಿದ ಕೇಸಿಗಿಂತ ಇದುವರೆಗೆ ಗುಪ್ತವಾಗಿ ಕಾಪಾಡಿಕೊಂಡು ಬಂದ ತಮ್ಮ ವೀಕ್‌ನೆಸ್ಸು ಮನೆಮಂದಿಗೆಲ್ಲ ಗೊತ್ತಾಗುತ್ತದಲ್ಲ ಅನ್ನುವುದೇ ಅವರಿಗೆ ದೊಡ್ಡ ಚಿಂತೆಯಾಗುತ್ತಿತ್ತು.

ಮದ್ಯಪಾನಿಗಳನ್ನು ಹಿಡಿಯುವುದು ಅಂಥ ಸುಲಭದ ಕೆಲಸವೇನಾಗಿರಲಿಲ್ಲ. ಚಿರತೆಯನ್ನು ಬೋನಿಗೆ ಕೆಡವುವಷ್ಟೇ ಸಾಹಸದ ಕೆಲಸ ಇದಾಗಿತ್ತು. ಪ್ರತಿವಾರವೂ ಒಂದೇ ಸರ್ಕಲಿನಲ್ಲಿ ತಪಾಸಣೆ ಮಾಡಿಕೊಂಡು ಕುಳಿತರೆ ಮಿಕಗಳೇ ಸಿಗುತ್ತಿರಲಿಲ್ಲ. ಪೊಲೀಸರು ಇಂತಿಂಥ ಕಡೆಯೇ ತಪಾಸಣೆಗೆ